ಅಧ್ಯಕ್ಷರು :— ಅದು ಉತ್ತಮ. ಇದರ ಬಗ್ಗೆ ಚರ್ಚಿಸಲು ಬೇರೆ ಸಮಯವನ್ನು ನಿಗಿದಪಡಿಸಿಕೊಳ್ಳೋಣ. ಆ ಕುರಿತ ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡಿರುವುದಾಗಿ ಸಚಿವರು ಹೇಳುತ್ತಿರುವುದರಿಂದ ಹಾಗೆಯೇ ಮಾಡೋಣ.

(ಒ) ಮೈಸೂರಿನಲ್ಲಿ ಪೊಲೀಸರ ಮೇಲೆ ದುಷ್ಕರ್ಮಿಗಳಿಂದ ಹಲ್ಲೆ.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೆ, ನಿನ್ನೆ ಮೈಸೂರಿನಲ್ಲಿ ನಡೆದಂಥ ಘಟನೆಯಿಂದ ಸಂವಿಧಾನಕ್ಕೆ ಅನ್ಯಾಯ ನಡೆದಿದ್ದು ದಿ ಮೈಸೂರ್ ಪ್ರಿವೆನ್‌ಷನ್ ಆಫ್ ಸ್ಲಾಟರ್ ಅಂಡ್ ಕ್ಯಾಟಲ್ ಪ್ರಿಸರ್ವೇಷನ್ ಆಕ್ಟ್, 1964 ಇದನ್ನು ಮೀರಿ ಜೊತೆಗೆ ಸುಪ್ರಿಂ ಕೋರ್ಟ್ ಜಡ್ಜ್‌ಮೆಂಟ್‌ನ್ನೂ ಮೀರಿ ನಡೆಸಿದಂಥ ಒಂದು ಭಯಾನಕ ಘಟನೆ ಬಗ್ಗೆ ತುಂಬಾ ನೊಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವೊತ್ತಿನ 'ಉದಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೈಸೂರಿನಲ್ಲಿ ಪೊಲೀಸರ ಮೇಲೆ ಹಲ್ಲೆ; ಗಾಳಿಯಲ್ಲಿ ಗುಂಡು ಶೀರ್ಷಿಕೆಯಡಿ ಬರುವ ಹಸುಗಳನ್ನು ಹತ್ಯೆಗಾಗಿ ಕಸಾಯಿಖಾನೆಗೆ ಕೊಂಡೊಯ್ಯುತ್ತಿದ್ದ ಲಾರಿಯನ್ನು ಪೊಲೀಸರು ವಶಪಡಿಸಿಕೊಂಡು ಬೇರೆಡೆಗೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳ ಗುಂಪೊಂದು ಬಲಾತ್ಕಾರವಾಗಿ ಹಸುಗಳನ್ನು ವಾಪಸ್ಸು ಪಡೆಯಲು ಪೊಲೀಸರ ಮೇಲೆ ಕಲ್ಲು ತೂರಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಉದ್ರಿಕ್ತ ಪರಿಸ್ಥಿತಿ ನಿರ್ಮಿಸಿದ್ದರಿಂದ ಪೊಲೀಸರು ಲಾಠಿ ಚಾರ್ಜ್ ಮಾಡಿ ಅಶ್ರುವಾಯು ಮತ್ತು ಗಾಳಿಯಲ್ಲಿ ಗುಂಡು ಹಾರಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ ಘಟನೆ ನಿನ್ನೆ ಮಧ್ಯರಾತ್ರಿ ಎನ್.ಆರ್. ಮೊಹಲ್ಲಾದಲ್ಲಿ ನಡೆದಿದೆ. ಕೆಲವು ಪೊಲೀಸ್ ಸಿಬ್ಬಂದಿ ಸೇರಿ ಹಲವರಿಗೆ ತೀವ್ರ ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆಯಿಂದ ಎರಡು ಪೊಲೀಸ್ ಜೀಪ್‌ಗಳು ಜಖಂಗೊಂಡಿವೆ. ಇಬ್ಬರು ದುಷ್ಕರ್ಮಿಗಳನ್ನು ಸ್ಥಳದಲ್ಲಿ ಬಂಧಿಸಲಾಗಿದ್ದು ಉಳಿದವರಿಗಾಗಿ ಶೋಧನಡೆಸಲಾಗುತ್ತಿದೆಯೆಂದು ಪೊಲೀಸ್ ಕಮೀಷನರ್‌ರವರು ತಿಳಿಸಿದ್ದಾರೆ. ನಿನ್ನೆ ರಾತ್ರಿ ಕಸಾಯಿಖಾನೆಗೆ ತರುತ್ತಿದ್ದ ಹಸುಗಳಿದ್ದ ಲಾರಿಯನ್ನು ರಾಜೇಂದ್ರನಗರದ ಯುವಕರ ಗುಂಪು ತಡೆದಾಗ ಮಾತಿನ ಚಕಮಕಿ ನಡೆದು ಉದ್ರಿಕ್ತ ಸ್ಥಿತಿ ನಿರ್ಮಾಣವಾಯಿತು. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಲಾರಿಯನ್ನು ಎನ್.ಆರ್. ಮೊಹಲ್ಲಾ ಠಾಣೆಗೆ ತಂದರು. ಆಗ ಮೇಯರ್ ಅರಿಫ್ ಹುಸೇನ್, ಪಾಲಿಕೆ ಸದಸ್ಯ ಅನ್ವರಿ ನೂರ್‌ರವರ ಮುಖಂಡತ್ವದಲ್ಲಿ ನೂರಾರು ಜನರ ಗುಂಪು ಠಾಣೆಗೆ ಧಾಮಿಸಿ ಹಸುಗಳನ್ನು ತಮ್ಮ ವಶಕ್ಕೆ ನೀಡಬೇಕೆಂದು ಒತ್ತಾಯಿಸಿದರು. ಠಾಣೆಯಲ್ಲಿದ್ದ ಮತ್ತೊಂದು ಗುಂಪು ಹಸುಗಳನ್ನು ಪ್ರಾಣಿದಯಾ ಸಂಘಕ್ಕೆ ಒಪ್ಪಿಸುವಂತೆ ಆಗ್ರಹಿಸಿತು. ಪೊಲೀಸರು ಎರಡೂ ಪಂಗಡದವರಿಗೂ ತಿಳಿ ಹೇಳಿ ಕಳುಹಿಸಿದರು. ನಂತರ ಪೊಲೀಸರು ಹಸುಗಳಿದ್ದ ಲಾರಿಯನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಲು ಹೋಗುತ್ತಿದ್ದಾಗ ಫೌಟೆನ್ ವೃತ್ತದ ಬಳಿ ಹಾಗೂ ಯಾ ಅಲ್ಲಾ ಮಸೀದಿ ಬಳಿ ಕಿಡಿಗೇಡಿಗಳ ಗುಂಪೊಂದು ವಾಹನವನ್ನು ನಿಲ್ಲಿಸಿ ಕಲ್ಲು, ಸೋಡಾ ಬಾಟಲಿಗಳ ತೂರಾಟ ನಡೆಸಿದ್ದರ ಪರಿಣಾಮವಾಗಿ ಪೊಲೀಸರಿಗೆ ಗಾಯಗಳಾಗಿವೆ.

ಅಧ್ಯಕ್ಷರು :— ನಮ್ಮ ನಿಯಮಾವಳಿ ಪ್ರಕಾರ newspaper information doesn't become a matter for us. ಅದನ್ನು ಆಧಾರವಾಗಿಟ್ಟುಕೊಂಡು ತಾವು ಹೇಳುವುದನ್ನು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏನನ್ನು ಹೇಳಲು ಹೊರಟಿನೆಂದರೆ, ಸಂವಿಧಾನದ ಆರ್ಟಿಕಲ್ 48 ರಲ್ಲಿ ತುಂಬಾ ಸ್ಪಷ್ಟವಾಗಿ ಹೇಳಲಾಗಿದೆ.

``Organisation of Agriculture and Animal husbandry:-

The State shall endeavour to organise agriculture and animal husbandry on modern and scientific lines and shall, in particular take steps for preservation and improving the breed and prohibiting the slaughter of cows and calves and other milk and draught cattle."

Further, the Mysore prevention of slaughter of cow and presevation of Cattle Act 1964:

According to Section 4 of this Act:

"Prohibition of slaughter of Cow or Cattle or She-buffalo-notwithstanding any law, custom or usage to the contrary no person shall slaughter or caused to be slaughtered or offered or caused to be offered for slaughter or otherwise intentionally kill or offer or caused to be offered for killing any cow or calf or she-buffalo."

ಮಾನ್ಯ ಅಧ್ಯಕ್ಷರೆ, ತುಂಬಾ ಸ್ಪಷ್ಟವಾಗಿ ಗೋಹತ್ಯೆ ನಿಷೇಧದ ಬಗ್ಗೆ ಸಂವಿಧಾನಬದ್ಧವಾಗಿ ಏನು ನಡೆಯಬೇಕೆನ್ನುವುದನ್ನೂ ಕೂಡ ರಾಜ್ಯದ ಈ ಒಂದು ಆಕ್ಟ್ ಕೂಡ ಹೇಳುತ್ತಿದೆ. ರಾಮನವಮಿ, ಮಹಾವೀರ ಜಯಂತಿ ಹಾಗೂ ಬಕ್ರಿದ್ ಈ ಮೂರೂ ಧಾರ್ಮಿಕ ಹಬ್ಬಗಳು ಒಟ್ಟಿಗೆ ಬರುತ್ತಿರುವ ಸಂದರ್ಭದಲ್ಲಿ ಈ ರೀತಿ ಗೋಹತ್ಯೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡುತ್ತಿರುವಾಗ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಹಸುಗಳನ್ನು ಗೋರಕ್ಷಾ ಕೇಂದ್ರಕ್ಕೆ ಒಯ್ಯುವುದನ್ನು ವಿರೋಧಿಸಿ ಉದ್ರಿಕ್ತರಾದ ಸುಮಾರು 300-400 ಜನರು ತಲ್ವಾರ್, ಮಚ್ಚುಗಳಿಂದ ಹಲ್ಲೆ ನಡೆಸಿದ್ದು ಇಬ್ಬರು ಇನ್ಸ್‌ಪೆಕ್ಟರುಗಳು ಸೇರಿದಂತೆ ಆರು ಜನರು ಗಾಯಗೊಂಡಿದ್ದಾರೆ. ರಕ್ಷಿತ ಗೋವುಗಳನ್ನು ನಗರ ಕಾಯ್ದಿಟ್ಟ ಪೊಲೀಸ್ ಮೈದಾನದಲ್ಲಿರಿಸಲಾಗಿದ್ದು ಪರಿಸ್ಥಿತಿ ಇನ್ನೂ ಬಿಗಿಯಾಗಿದೆ. ಈ ರೀತಿ ಒಂದು ಕಡೆ ನೇರವಾಗಿ ಗೋಹತ್ಯೆ ನಡೆಯುತ್ತಿದ್ದರೆ ಮತ್ತೊಂದು

ಕಡೆ ಪೊಲೀಸರ ಮೇಲೆ ನೇರವಾಗಿ ಹಲ್ಲೆ ನಡೆಸಲಾಗಿದೆ. ಅದಕ್ಕೋಸ್ಕರ ನಾನು ಹೇಳಬಯಸುತ್ತಿರುವುದೇನೆಂದರೆ, ಈ ರೀತಿ ನಡೆದಿರುವ ದುರ್ಘಟನೆ ಬಗ್ಗೆ ರಾಜ್ಯ ಸರ್ಕಾರ ತುಂಬಾ ಸ್ಪಷ್ಟವಾಗಿ ಹೇಳಬೇಕು. ಕರ್ನಾಟಕ ರಾಜ್ಯದಲ್ಲಿ ಗೋಹತ್ಯೆ ನಿಷೇಧಿಸಿರುವ ಸಂದರ್ಭದಲ್ಲಿ ಇಡೀ ರಾಜ್ಯಾದ್ಯಂತ ಕುರಿ, ಕೋಳಿ ಮಾಂಸ ಮಾರಾಟವಾಗುತ್ತಿರುವ ರೂಪದಲ್ಲಿ ಗೋವಿನ ಮಾಂಸ ಕೂಡ ಮಾರಾಟವಾಗುತ್ತಿದೆ. ಎಲ್ಲೆಂದರಲ್ಲಿ ಗೋಹತ್ಯೆ ನಡೆಯುತ್ತಿದೆ. ಇದರ ಬಗ್ಗೆ ತಾವು ಏನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು. ರಾಜ್ಯದ ಅನೇಕ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ವರದಿಯಾಗಿರುವಂತೆ ಈ ರೀತಿ ಗೋವುಗಳನ್ನು ಲಾರಿಗಳಲ್ಲಿ ಸಾಗಿಸುವುದೂ ಕೂಡ ತಪ್ಪು ಎಂಬುದನ್ನು ಸೆಕ್ಷನ್ 8 ಹೇಳುತ್ತದೆ.

"Restriction on transport of animal or cow for slaughter: No person shall transport or offer for transport or cause to be transported any animal or cow from any place within the state to any place outside the state for the purpose of its slaughter in contravention of the provision of this Act, or with the knowledge that it will be or it lilkely to be so slaughtered."

ಈ ರೀತಿ ಹಸುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಅನುಮತಿ ನೀಡುವುದೂ ಕೂಡ ತಪ್ಪು. ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾದ ಕಾನೂನು ಇರುವಂಥ ಸಂದರ್ಭದಲ್ಲಿ ಅದನ್ನು ಮುರಿಯುವ ದ್ರೋಹಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಏಕೆಂದರೆ, ಹಸುವೆಂದ ತಕ್ಷಣ ಮುಂಚಿನಿಂದಲೂ ಅದರ ಬಗ್ಗೆ ಯೋಚನೆ ಮಾಡಿಕೊಂಡು ಬಂದಿರುವಂಥ ದಾಟಿಯೇ ಬೇರೆಯಾಗಿದ್ದು, ಗೋವನ್ನು ತಾಯಿಗೆ ಸಮಾನವಾಗಿ ಕಾಣುತ್ತೇವೆ. ತಾಯಿಯಾದವಳು ಮಗು ಬೆಳೆದು ಒಂದು ಹಂತಕ್ಕೆ ಬರುವವರೆಗೂ ಹಾಲುಣಿಸುತ್ತಾಳೆ, ಆದರೆ, ಕೊನೆಯ ತನಕ ಹಸುವೇ ನನ್ನ ತಾಯಿ ಎಂದು ಮಹಾತ್ಮಗಾಂಧಿಯವರೇ ಹೇಳಿದ್ದಾರೆ. ಗೋವಿನ ಬಗ್ಗೆ ಪೂಜನೀಯ ಭಾವನೆ ಇಟ್ಟುಕೊಂಡಿರುವ ಈ ಭರತ ಭೂಮಿಯಲ್ಲಿ ಹಸುವನ್ನು ಕೊಂದು ಬಹುಸಂಖ್ಯಾತರ ಮನಸ್ಸುಗಳಿಗೆ ನೋವುಂಟು ಮಾಡುವಂಥ ಪ್ರಕ್ರಿಯೆ ವಿಶೇಷವಾಗಿ ಸ್ವತಂತ್ರ ಭಾರತದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಕಣ್ಣಿದ್ದರೂ ಕೂಡ ಕುರುಡನ ರೂಪದಲ್ಲಿ ರಾಜ್ಯ ಸರ್ಕಾರ ನಡೆದುಕೊಂಡು ಹೋಗುತ್ತಿರುವಂಥ ವ್ಯವಸ್ಥೆ ಇದೆಯೆಲ್ಲಾ ಇದನ್ನು ಖಂಡಿತವಾಗಿಯೂ ರಾಜ್ಯದ ದೇಶದ ಜನರು ಸಹಿಸುವುದಿಲ್ಲವೆಂಬ ಅಂಶ ಗೊತ್ತಿದ್ದರೂ ಕೂಡ ತಾವು ಏನು ಕ್ರಮ ಕೈಗೊಳ್ಳುತ್ತಿದ್ದೀರಿ? ಇದು ಮೊದಲನೆಯಾದಾದರೆ, ಎರಡನೆಯದಾಗಿ, 300-400 ಜನರು ಮಾರಕಾಸ್ತ್ರ ಹಾಗೂ ಮಚ್ಚುಗಳನ್ನು ಹಿಡಿದು ಸಾಮಾನ್ಯ ಜನರ ಮೇಲಲ್ಲ, ಪೊಲೀಸರ ಮೇಲೆ ನುಗ್ಗಿ ಅವರ ಮೇಲೆ ಗೂಂಡಾಗಿರಿ ನಡೆಸಿರುವಂಥ ಸಂದರ್ಭದಲ್ಲಿ ಪೊಲೀಸರೂ ಕೂಡ ಇವೊತ್ತು ಆಸ್ಪತ್ರೆಯಲ್ಲಿದ್ದಾರೆ. ಗುಂಡು

ಹಾರಿಸಿದ್ದಾರೆ, ಅಶ್ರುವಾಯು ಸಿಡಿಸಿದ್ದಾರೆ, ಅನೇಕ ವ್ಯಕ್ತಿಗಳು ಅಲ್ಲಿಂದ ಪರಾರಿಯಾಗಿದ್ದಾರೆ. ಗೋವುಗಳನ್ನು ಬೇರೆಡೆಗೆ ಸಾಗಿಸುತ್ತಿದ್ದಂಥ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಪ್ರಭಾವಿ ವ್ಯಕ್ತಿಗಳ ಹೆಸರುಗಳೂ ಕೂಡ ಪತ್ರಿಕೆಗಳಲ್ಲಿ ವರದಿಯಾಗಿದೆ. ಅಂತಹ ಪ್ರಭಾವಿ ವ್ಯಕ್ತಿಗಳೇ ಈ ರೀತಿ ಗೂಂಡಾಗಳ ಪರವಾಗಿದ್ದುಕೊಂಡು ಉದ್ರಿಕ್ತ ವಾತಾವರಣ ನಿರ್ಮಿಸಿರುವ ಹಿನ್ನೆಲೆಯಲ್ಲಿ ನಾನು ರಾಜ್ಯ ಸರ್ಕಾರಕ್ಕೆ ಕೇಳುವುದಿಷ್ಟೆ ರಾಜ್ಯದಲ್ಲಿ ಗೋಹತ್ಯೆ ನಡೆಯುತ್ತಿರುವಾಗ ಇದನ್ನು ನಿಷೇಧಿಸುವ ನಿಟ್ಟಿನಲ್ಲಿ ಸರ್ಕಾರದವರಾದ ನೀವು ಯಾವ ರೀತಿಯಾದ ಉಗ್ರ ಕ್ರಮ ಕೈಗೊಳ್ಳುತ್ತೀರಿ? ಗೋಹತ್ಯೆ ಕೇವಲ ಮೈಸೂರಿನಲ್ಲಿ ಮಾತ್ರ ನಡೆಯದೆ ಇಡೀ ಕರ್ನಾಟಕ ರಾಜ್ಯಾದ್ಯಂತ ನಡೆಯುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಹಸುಗಳನ್ನು ಲಾರಿಯಲ್ಲಿ ಸಾಗಿಸುತ್ತಿದ್ದಾಗ ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕರ್ತರು ತಡೆದು ಹಸುಗಳನ್ನು ಪೊಲೀಸರ ವಶಕ್ಕೆ ಒಪ್ಪಿಸುವಂಥ ಸಂದರ್ಭದಲ್ಲಿ 300-400 ಸಂಖ್ಯೆಯಲ್ಲಿ ಗೂಂಡಾಗಳು, ಕಿಡಿಗೇಡಿಗಳು ಬಂದು ಪೊಲೀಸರ ಮೇಲೆ ಹಲ್ಲೆ ನಡೆಸಿ ಉದ್ರಿಕ್ತ ವಾತಾವರಣ ನಿರ್ಮಿಸಿರುವ ಹಿನ್ನೆಲೆಯಲ್ಲಿ ಕಿಡಿಗೇಡಿಗಳ ಮೇಲೆ ತಾವು ಯಾವ ರೀತಿಯ ಕ್ರಮ ಕೈಗೊಳ್ಳುತ್ತೀರಿ? ಜೊತೆಗೆ ವಿಶೇಷವಾಗಿ ಮೈಸೂರಿನಲ್ಲಿ ಇಂತಹ ದುರ್ಘಟನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಯಾವ ಪ್ರಭಾವಿ ವ್ಯಕ್ತಿಗಳು ಈ ರೀತಿ ಸಂವಿಧಾನಕ್ಕೆ ವಿರುದ್ಧವಾದ ಪ್ರಯತ್ನ ನಡೆಸುತ್ತಿದ್ದಾರೋ ಈ ರೀತಿ ಆಕ್ಟ್‌ಅನ್ನು ವಿರೋಧವಾಗಿ ಬಳಸುತ್ತಿದ್ದಾರೋ, ಹಸುಗಳನ್ನು ಸಾಗಣೆ ಮಾಡುವಂತಹ ಸಂದರ್ಭದಲ್ಲಿ ಕಾನೂನುನನ್ನು ಮುರಿದು ರಕ್ಷಣೆ ಕೊಡುವಂತಹ ಕಿಡಿಗೇಡಿ ಪ್ರಭಾವಿತ ವ್ಯಕ್ತಿಗಳು ಏನು ಇದ್ದಾರೆ ಇವರನ್ನು ಬಂದಿಸಿದ್ದಿರಾ? ಆ ಮೇಯರ್‌ರವರನ್ನು ಬಂಧಿಸಿದ್ದಿರಾ? ಹಸುಗಳನ್ನು ಸಾಗಣೆ ಮಾಡುವಂತಹ ಸಂದರ್ಭದಲ್ಲಿ ಆ ದುಷ್ಟಕೂಟಕ್ಕೆ ಬೆಂಬಲ ಕೊಡುವಂತಹ ಆ ಮೇಯರ್‌ರವರನ್ನು ಬಂಧಿಸುತ್ತೀರಾ? ಇದರ ಜೊತೆಗೆ ಪೋಲಿಸ್ ಇಲಾಖೆಯವರಿಗೆ ಈ ರಾಜ್ಯದಲ್ಲಿ ರಕ್ಷಣೆ ಇಲ್ಲವೆಂದರೆ ನಾಳೆ ನಮ್ಮನ್ನು ರಕ್ಷಣೆ ಮಾಡುವವರು ಯಾರು? ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಜನ ಗುಂಡಾಗಿರಿ ಮಾಡಿದ್ದಾರೆ? ಅದರಲ್ಲಿ ಎಷ್ಟು ಜನರನ್ನು ಬಂಧಿಸಿದ್ದೀರಿ? ಅರೆಸ್ಟ್ ಮಾಡದೇ ಇರತಕ್ಕಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಏಕೆಂದರೆ, ಇವತ್ತು ಮೈಸೂರಿನಲ್ಲಿ ಮಾತ್ರ ಇಂಥ ಘಟನೆ ನಡೆದಿದೆ, ಒಂದು ಪಕ್ಷ ನೀವು ಅಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ ಇಡೀ ರಾಜ್ಯಕ್ಕೆ ಈ ಘಟನೆ ಹಬ್ಬಬಹುದು. ಇವತ್ತು ನಮ್ಮ ರಾಜ್ಯ ಶಾಂತವಾಗಿದೆ. ಇವತ್ತು ರಾಮನವಮಿ. ಒಳ್ಳೆಯ ವಿಚಾರವನ್ನು ನಾವು ಇಲ್ಲಿ ಮಾತನಾಡಬೇಕು. ಸ್ವತಂತ್ರ ಬಂದು 50 ವರ್ಷಗಳಾದರೂ ಇನ್ನೂ ನಮ್ಮ ದೇಶದಲ್ಲಿ ಗೋಹತ್ಯೆ ನಡೆದಿದೆ, ಪೋಲೀಸರ ಮೇಲೆ ಹಲ್ಲೆಯಾಗಿದೆ ಎನ್ನುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ನಮಗೆ ಶೋಭೆ ತರುವುದಿಲ್ಲ ಇದಕ್ಕೆಲ್ಲಾ ಈ ಸರ್ಕಾರವೇ ಹೊಣೆ. ಆದ್ದರಿಂದ ಇಂಥ ಪವಿತ್ರವಾದ ದಿನದಲ್ಲಿ ತಾವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು :— ರಾಮನವಮಿ, ಗೋಕಲಾಷ್ಟಮಿ, ರಂಜಾನ್, ಇದು ಯಾವುದೂ ನಮಗೆ ಸಂಬಂಧವಿಲ್ಲ. ನಮಗೆ ಸಂಬಂಧವಿರತಕ್ಕಂಥದ್ದು ಬಹಳ ಸೀಮಿತವಾದ ವಿಚಾರ. ನಿನ್ನೆ ಅಲ್ಲಿ ಘಟನೆ ನಡೆದಾಗ ಪೋಲಿಸ್‌ರಿಗೆ ಮಾರಕಾಸ್ತ್ರಗಳಿಂದ ಹೊಡೆದು ಹಲ್ಲೆಯಾಗಿದೆ ಎಂದು ಹೇಳುತ್ತೀರಿ, ಇದಕ್ಕೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ಮಾನ್ಯ ಗೃಹ ಸಚಿವರು ಏನು ಹೇಳುತ್ತಾರೆ ಹೇಳಲಿ. ಉಳಿದ ಎಲ್ಲಾ ವಿಚಾರ ನಮ್ಮ ಸದನದ ವ್ಯಾಪ್ತಿಗೆ ಬರುವುದಿಲ್ಲ. ನಾವು ಸ್ವಲ್ಪ ಜಾಗೃತಿಯಿಂದ ಹೋಗೋಣ.

ಶ್ರೀ ಬಿ.ಎನ್. ಯಡಿಯೂರಪ್ಪ (ಶಿಕಾರಿಪುರ) :— ನಾನು ಏನು ಹೇಳುತ್ತೇನೆಂದರೆ, ಕರ್ನಾಟಕದಲ್ಲಿ ಇವತ್ತು ಸೌಹಾರ್ದಯುತವಾದ ವಾತಾವರಣ ಇದೆ. ಇವತ್ತು ರಾಮನವಮಿ ನಡೆಯುವಂತಹ ಸಂದರ್ಭದಲ್ಲಿ ಪೋಲಿಸ್‌ನವರು ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವಂತಹ ಸನ್ನಿವೇಶದಲ್ಲಿ ಪೋಲಿಸ್‌ರವರ ಮೇಲೆ ದೌರ್ಜನ್ಯ ಮಾಡುವಂಥದ್ದು ಮತ್ತು ಅಲ್ಲಿರತಕ್ಕಂಥ ಪ್ರತಿಷ್ಠಿತ ವ್ಯಕ್ತಿಗಳು, ಜವಾಬ್ದಾರಿ ಇರತಕ್ಕಂಥವರು ಪೋಲಿಸ್ ಠಾಣೆಯ ಹತ್ತಿರ ಹೋಗಿ ಹಸುಗಳನ್ನು ಸ್ಟಾಟರ್ ಹತ್ತಿರ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಒತ್ತಾಯ ತರತಕ್ಕಂಥದ್ದು, ಇದು ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ಶೋಭೆ ತರುವಂಥದ್ದು? ಈ ರೀತಿ ಗುಂಡಾಗಿರಿಗೆ ಅವಕಾಶ ಕೊಟ್ಟರೆ ಮುಂದೆ ಏನಾಗಬೇಕು?

ಅಧ್ಯಕ್ಷರು :— ನೀವು ಹೇಳುತ್ತಿರುವ ಮಾತಿಗೆಲ್ಲಾ ಆಧಾರ ನ್ಯೂಸ್ ಪೇಪರ್ ಅಲ್ಲವೆ? ಈ ಸದನದಲ್ಲಿ ಈ ಬಗ್ಗೆ ಹಲವಾರು ರೂಲಿಂಗ್ಸ್ ಕೊಟ್ಟಿರುವುದು ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಕೇವಲ ನ್ಯೂಸ್ ಪೇಪರ್‌ಗಳಿಂದ ಮಾತ್ರವಲ್ಲ, ನಮ್ಮ ಆ ಭಾಗದ ಶಾಸಕರು ಖುದ್ದಾಗಿ ನೋಡಿಕೊಂಡು ಬಂದು ನನ್ನ ಹತ್ತಿರ ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ನಮ್ಮ ದೇಶ ಸಾಂಸ್ಕೃತಿಕ ದೇಶ. ನಾವು ಗೋಮಾತೆಯನ್ನು ಪೂಜಿಸುತ್ತೇವೆ.

ಅಧ್ಯಕ್ಷರು :— ತಾವು ಹೇಳುವುದೇನೊ ನಿಜ ಆದರೆ ಅದಕ್ಕೆ ಸ್ವಲ್ಪ ಹುಲ್ಲು ಹಾಕಬೇಕು ಅಲ್ಲವೇ? ಕೇವಲ ಪೂಜೆ ಮಾಡಿದರೆ ಸಾಕೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಇಂಥ ಗೋಮಾತೆಯನ್ನು, ನಿರ್ಧಯವಾಗಿ ಕೊಲೆ ಮಾಡುವುದು ಎಂದರೇನು?

ಅಧ್ಯಕ್ಷರು :— ಗೋಮಾತೆಯನ್ನು ಪೂಜೆ ಮಾಡುವುದಲ್ಲದೆ ಅದನ್ನು ಸರಿಯಾಗಿ ಪೋಷಿಸಬೇಕು ಹಾಲು ಕರೆಯುವಾಗ ಮಾತ್ರ ಅದಕ್ಕೆ ಹುಲ್ಲು, ನೀರು ಹಾಕಿ, ಹಾಲು ಬತ್ತಿಹೋದ ತಕ್ಷಣ ಅದನ್ನು ಬೀದಿಗೆ ಬಿಟ್ಟರೆ ಹೇಗೆ?

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ಆ ಪ್ರಾಣಿ "ಇದಂ ಶರೀರಂ ಪರೋಪಕಾರಿ" ಎಂದು ಇಟ್ಟುಕೊಂಡಿರತಕ್ಕಂಥ ಪ್ರಾಣಿ...

ಅಧ್ಯಕ್ಷರು :— ಮಾನ್ಯ ಶಂಕರಲಿಂಗೇಗೌಡರೆ, ತಾವು ಸ್ವಲ್ಪ ಕೇಳಿ, ನಮ್ಮ ಸಂಸ್ಕೃತಿಯಲ್ಲಿ, ನಮ್ಮನ್ನು ನಮ್ಮ ತಾಯಿ ಹೆತ್ತು ಹೊತ್ತು ಬೆಳೆಸಿ ನಮಗೆ ಮೀಸೆ ಬಂದ ಮೇಲೆ ಮದುವೆ ಮಾಡಿಸಿದರೆ, ನಾವು ತಾಯಿಯನ್ನು ಮರೆಯುತ್ತೇವೆ, ಅವಳಿಗೆ ಊಟ ಹಾಕುವುದಿಲ್ಲ; ಇದೇ ರೀತಿ ಹಸು ಹಾಲು ಕೊಡುವಾಗ ನಾವು ಅದನ್ನು ಚೆನ್ನಾಗಿ ನಿಭಾಯಿಸುತ್ತೇವೆ, ಹಾಲು ಕೊಡುವುದು ನಿಂತು ಹೋದರೆ ಅದನ್ನು ಬೀದಿಗೆ ಬಿಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಯಾರೋ ಒಬ್ಬರು ಆ ರೀತಿ ಮಾಡಬಹುದು ಎಲ್ಲರೂ ಮಾಡುತ್ತಾರೆಯೇ?

ಅಧ್ಯಕ್ಷರು :— ವಾಸ್ತವಾಂಶ ಇದು ಸತ್ಯ.

ಶ್ರೀ ಕೆ.ಎಸ್ ಈಶ್ವರಪ್ಪ :— ಮದುವೆಯಾದರೂ ಹೆಂಡತಿಯ ಸ್ಥಾನ ಹೆಂಡತಿಗೆ ಇರುತ್ತದೆ, ತಾಯಿ ಸ್ಥಾನ ತಾಯಿಗೆ ಇರುತ್ತದೆ..

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ಮಗನನ್ನು ಮಿತ್ರನೆಂದು ವರ್ಣಿಸು, ಮಗಳನ್ನು ಮದುವೆಯಾದ ಮೇಲೆ ವರ್ಣಿಸು, ಸ್ನೇಹಿತರನ್ನು ಕಷ್ಟಕಾಲದಲ್ಲಿ ವರ್ಣಿಸು, ಹೆಂಡತಿಯನ್ನು ದರಿದ್ರನಾದಾಗ ವರ್ಣಿಸು, ನಿನ್ನನ್ನು ಮಾತ್ರ ನೀನು ಎಂದಿಗೂ ವರ್ಣಿಸಿಕೊಳ್ಳಬೇಡ, ಇದನ್ನು ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು :— ನಿನಗೆ ನಾನು ವಂದಿಪೆನು.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ಗೋಹತ್ಯೆಯನ್ನು ಖಂಡಿಸುವುದು ಭಾರತೀಯ ಜನತಾ ಪಾರ್ಟಿಯವರ ಆದ್ಯ ಕರ್ತವ್ಯ. ಹಿಂದುತ್ವ, ಧರ್ಮ, ಇವು ಎಲ್ಲವನ್ನೂ ಇಟ್ಟುಕೊಂಡಿರತಕ್ಕಂಥ ಸಂಸ್ಕೃತಿಯ ನಾಡಾಗಿದೆ, ಇಂಥ ರಾಷ್ಟ್ರ ಪರರ ಕೈಗೆ ಸಿಕ್ಕಬಾರದು, ಮಾನವೀಯತೆ ಉಳಿಯಬೇಕು ಎಂಬುದೇ ನಮ್ಮ ಏಕಮಾತ್ರ ಗುರಿ.

ಶ್ರೀ ವೈಜನಾಥ್ ಪಾಟೀಲ್ :— ಗೋವುಗಳನ್ನು ಕಸಾಯಿಖಾನೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವವರು ಯಾರು? ನಿಮಗೆ ಅಷ್ಟು ಗೋವುಗಳ ಮೇಲೆ ಅಭಿಮಾನ ಇದ್ದರೆ ಮಾರಾಟ ಮಾಡುವಲ್ಲಿ ಹೋಗಿ ಅವರನ್ನು ತಡೆಯಬಹುದಲ್ಲವೆ? ಗೋವುಗಳನ್ನು ಕಡಿಯುವವರು ಕಡಿಯುತ್ತಾರೆ, ಆದರೆ, ಗೋವುಗಳನ್ನು ಮಾರುವವರನ್ನು ತಡೆಯುವ ಬಗ್ಗೆ ಅಭಿಮಾನವಿರುವ ನೀವುಗಳು ವಿಚಾರ ಮಾಡಿದ್ದೀರಾ?

ಶ್ರೀ ಎನ್ ರಾಜೇಂದ್ರನ್:— ಮನುಷ್ಯರನ್ನು ಕೊಲೆ ಮಾಡಿ ಮಧ್ಯಾಹ್ನವೇ ಹೊರಗಡೆ ಬರುತ್ತಿದ್ದಾರೆ. ಇದಕ್ಕೆ ಪರಿಹಾರವೇ ಇಲ್ಲ. ಇದಕ್ಕೆ ಪರಿಹಾರ ಸಿಕ್ಕುತ್ತದೆಯೇ?

ಶ್ರೀ ಇ. ಮಾರುತಿರಾವ್ ಪವಾರ್:— ಈ ಘಟನೆ ಸಂಪೂರ್ಣವಾಗಿ ನಡೆದಿರತಕ್ಕಂಥದ್ದು ನನ್ನ ಮತಕ್ಷೇತ್ರದಲ್ಲಿ. ಈ ಬಗ್ಗೆ ನಗರ ಪೋಲಿಸ್ ಆಯುಕ್ತರಿಗೆ, ಸಂಬಂಧಪಟ್ಟ ಪೋಲಿಸ್ ಠಾಣೆಗೆ, ಗೃಹ ಸಚಿವರಿಗೂ ಕೂಡ ಈ ವಿಷಯವನ್ನು ನಿನ್ನೆ ಗಮನಕ್ಕೆ ತಂದಿದ್ದೇನೆ. ಇದು ಬಹಳ ಸೂಕ್ಷ್ಮವಾದಂಥ ವಿಚಾರ. ಏಕೆಂದರೆ, ಇಬ್ಬರು ಆ ಏಳು ಹಸುಗಳನ್ನು ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಇಬ್ಬರು ಯುವಕರು ಬಂದು ತಡೆದು ಈ ಹಸುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ಕೇಳಿದಾಗ, ಅವರು ಇವುಗಳನ್ನು ನಾವು ಬಕ್ರೀದ್ ಹಬ್ಬಕ್ಕೆ ಕುಯ್ಯೋವುದಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರೆ. ತಕ್ಷಣವೇ ಆ ಯುವಕರು ಪೋಲಿಸ್ ಠಾಣೆಗೆ ಹೋಗಿ ಈ ವಿಚಾರದ ಬಗ್ಗೆ ದೂರು ಕೊಡೋಣ ಎಂದು ಯೋಚಿಸುತ್ತಿರುವಾಗಲೇ ಅಲ್ಲಿಗೆ ಪೋಲಿಸ್‌ನವರು ಬಂದು ಹಸುಗಳನ್ನು ಪೋಲಿಸ್ ಠಾಣೆಯ ಹತ್ತಿರಕ್ಕೆ ಕರೆದುಕೊಂಡು ಹೋಗಿ, ಹಸುಗಳನ್ನು ಸಿಎಆರ್‌ಗೆ ತೆಗೆದುಕೊಂಡು ಹೋಗಬೇಕು ಎನ್ನುವಂಥ ಸಂದರ್ಭದಲ್ಲಿ, ಪೋಲಿಸ್ ಠಾಣೆಯ ಹತ್ತಿರ ಕೆಲವು ಮುಖಂಡರುಗಳು ಅಲ್ಪಸಂಖ್ಯಾತರಿಗೆ ಪ್ರಚೋದನೆ ಮಾಡಿ, ನೀವು ಈ ಹಸುಗಳನ್ನು ಬಿಡಬೇಕು ಎಂದು ಒತ್ತಾಯ ಮಾಡಿದಾಗ, ಅಲ್ಲಿರತಕ್ಕಂಥ ಬೇರೆ ಗುಂಪಿನವರು ಗೋವಧೆಗೆ ಹೋಗತಕ್ಕಂಥ ಹಸುಗಳನ್ನು ತಡೆದು, ಇದು ತಪ್ಪು ಪೋಲಿಸ್ ಠಾಣೆಗೆ ಇವುಗಳನ್ನು ಪುನಃ ಕಳುಹಿಸಿಸಬೇಕು ಎಂದು ಭಜರಂಗದಳದ ಗುಂಪಿನ ಕೆಲವು ಯುವಕರು ಒತ್ತಾಯ ಮಾಡಿದಾಗ ಇದಕ್ಕೆ ಕೆಲವರು ಬಹಳ ವಿರೋಧ ಮಾಡಿದ್ದಾರೆ. ಇದರಿಂದ ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಲು ಕಾರಣವಾಯಿತು. ನಂತರ ಪೋಲಿಸ್ ಇಲಾಖೆಯವರು ಒಂದು ಟೆಂಪೋ ತೆಗೆದುಕೊಂಡು ಬಂದು ಅವುಗಳನ್ನು ಸಿ.ಎ.ಆರ್.ಗೆ ಕಳುಹಿಸತಕ್ಕಂಥ ಸಂದರ್ಭದಲ್ಲಿ ಫೌಂಟನ್ ಸರ್ಕಲ್‌ನಲ್ಲಿ ಕಲ್ಲು ತೂರಾಟ ಮಾಡಿ, ಸೋಡಾ ಬಾಟಲಿಗಳನ್ನು ಹೊಡೆದು ಅಲ್ಲಿ ಬಡೇ ಮಖಾನ್‌ನಿಂದ ಪ್ರಚೋದನೆ ಮಾಡಿ ಅಲ್ಲಿರತಕ್ಕಂಥ ಕೆಲವು ಯುವಕರನ್ನು ಸೇರಿಸಿದ್ದಾರೆ. ನಂತರ ಅಲ್ಲಿ ಪೋಲಿಸ್‌ನವರು ಯಾವುದೋ ಒಂದು ರೀತಿಯಲ್ಲಿ ತಪ್ಪಿಸಿ ಸಿ.ಎ.ಆರ್.ಗೆ ಹೋಗುವಂಥ ಸಂಧರ್ಬದಲ್ಲಿ ಪುನಃ ಗೌವರ್ನಮೆಂಟ್ ಹೌಸ್ ಹತ್ತಿರ, ಬಡೇ ಮಖಾನ್ ಮೊಹಮ್ಮದ್ ಶೇಕ್ ಬ್ಲಾಕ್ ಹತ್ತಿರ, ಪೋಲಿಸ್‌ನವರು ತೆಗೆದುಕೊಂಡು ಹೋಗತಕ್ಕಂಥ ಹಸುಗಳನ್ನು ತಡೆದು ನಾಲ್ಕು ಹಸುಗಳನ್ನು ವಾಪಸ್ ತೆಗೆದುಕೊಂಡು ಹೋಗಿದ್ದಾರೆ, ಇದನ್ನು ಮಾಡಿದವರು ಯಾರು? ಏಳು ಹಸುಗಳಲ್ಲಿ ಮೂರು ಹಸುಗಳು ಪೋಲಿಸ್ ಇಲಾಖೆಗೆ ಕಳುಹಿಸಿದ ನಂತರ ಉಳಿದ ನಾಲ್ಕು ಹಸುಗಳು ಎಲ್ಲಿಗೆ ಹೋಯಿತು? ನಾನು ಏಕೆ ಈ ಮಾತನ್ನು ಗಂಭೀರವಾಗಿ ಹೇಳುತ್ತಿದ್ದೇನೆಂದರೆ, ನನ್ನ ಮತಕ್ಷೇತ್ರದಲ್ಲಿ ಸುಮಾರು 60 ಸಾವಿರ ಅಲ್ಪಸಂಖ್ಯಾತರು ಇದ್ದಾರೆ. ಇದರಲ್ಲಿ ಬಹಳ ಪ್ರಮುಖವಾದ ಮುಖಂಡರುಗಳು ಇದಕ್ಕೆ ಪ್ರಚೋದನೆ ನೀಡಿದ್ದಾರೆ. ಇವತ್ತು ಇದನ್ನು ನಿಯಂತ್ರಣ ಮಾಡಲಿಲ್ಲವೆಂದರೆ ಕೋಮು ಗಲಭೆಗೆ ಇವರೇ

7H39.46

ಕಾರಣಕರ್ತರಾಗುತ್ತಾರೆ. ದಯಮಾಡಿ ನಾನು ತಮ್ಮಲ್ಲಿ ಏನು ನಿರೀಕ್ಷೆ ಮಾಡುತ್ತೇನೆಂದರೆ, ನನ್ನ ಕ್ಷೇತ್ರದಲ್ಲಿ ನಾವು ಬಿಜೆಪಿಯವರಾದರು ನಮ್ಮ ಮೇಲೆ ಅಲ್ಪಸಂಖ್ಯಾತ ಮತದಾರರು ಬಹಳ ವಿಶ್ವಾಸ ಪ್ರೀತಿ ಇಟ್ಟಿದ್ದಾರೆ. ನಮ್ಮಗಳ ಜೊತೆಯಲ್ಲಿ ಬಂದು ಕೆಲಸ ಮಾಡಿಕೊಂಡು ಹೋಗುತ್ತಾರೆ. ಹೀಗಿರುವಾಗ ಕೆಲವು ಅಲ್ಪಸಂಖ್ಯಾತರ ಮುಖಂಡರುಗಳು ಅಲ್ಪಸಂಖ್ಯಾತರನ್ನು ಎತ್ತಿಕಟ್ಟಿ ಪ್ರಚೋದನೆ ಮಾಡಿ, ಪೋಲೀಸ್‌ನವರ ಮೇಲೆ ಸೋಡಾಬಾಟಲಿಗಳನ್ನು ಹೊಡೆದು ಹಲ್ಲೆ ಮಾಡುತ್ತಾರೆ ಎಂದರೆ ಏನರ್ಥ? ಪುಟ್ಟಸ್ವಾಮಿ ಗೌಡರು, ತಮ್ಮಯ್ಯನವರು, ಬಹಳ ದಕ್ಷ ಅಧಿಕಾರಿಗಳು ಎಂದು ರಾಜ್ಯ ಸರ್ಕಾರವೇ ಹೇಳಿಕೆ ಕೊಟ್ಟಿದೆ. ಇಂಥ ಪೋಲೀಸ್ ಅಧಿಕಾರಿಗಳು, ವ್ಯಾನ್‌ನಲ್ಲಿ ಆ ಹಸುಗಳನ್ನು ತೆಗೆದುಕೊಂಡು ಹೋಗುವಂಥ ವೇಳೆಯಲ್ಲಿ ವ್ಯಾನ್‌ನ್ನು ತಡೆದು ಹಸುಗಳನ್ನು ಕೆಳಗಿಳಿಸಿ ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಮೈಸೂರಿನಲ್ಲಿ ನಡೆಯುತ್ತಿದೆ ಎಂದರೆ ಇದು ಹೇಗೆ? ಸಾರ್ವಜನಿಕರಿಗೆ ರಕ್ಷಣೆ ನೀಡುವಂಥ ಪೋಲೀಸ್ ಅಧಿಕಾರಿಗಳ ಮೇಲೆ ಈ ರೀತಿ ದೌರ್ಜನ್ಯ ನಡೆಯುತ್ತಿದೆ ಎಂದರೆ ಏನರ್ಥ? ಮೈಸೂರಿನಲ್ಲಿ ಮಂತ್ರಿಗಳು ಭಾಷಣ ಮಾಡುತ್ತಾರೆಂದರೆ ಈಚೆಕಡೆಯಿಂದ ಬಂದಂಥ ಕೆಲವು ಜನರು ಚಪ್ಪಲಿ ತೆಗೆದುಕೊಂಡು ಹೊಡೆಯುತ್ತಾರೆ, ಮೈಸೂರಿನಲ್ಲಿ ಈ ರೀತಿ ಕಾನೂನು ಸುವ್ಯವಸ್ಥೆ ಕೆಟ್ಟು ಹೋದರೆ ಏನರ್ಥ? ಮೈಸೂರಿನಲ್ಲಿ ನಾವೆಲ್ಲಾ ಬಹಳ ಸೌಹಾರ್ದಯುತವಾಗಿ ಬಾಳುತ್ತಿದ್ದೇವೆ, ಇಂಥ ಘಟನೆ ಮುಂದೆ ಸಂಭವಿಸಬಾರದು ಎನ್ನುವುದಾದರೆ ಸರ್ಕಾರ ಕೂಡಲೇ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಅವರು ಎಷ್ಟೇ ದೊಡ್ಡ ರಾಜಕಾರಣಿಯಾಗಿದ್ದರೂ ಅವರನ್ನು ಬಯಲಿಗೆ ಎಳೆದು ತನಿಖೆ ಮಾಡಿಸಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ತಮ್ಮ ಮುಖೇನ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ಮೈಸೂರಿನಲ್ಲಿ ನಾವು ಮೂರು ಜನ ಬಿಜೆಪಿ ಶಾಸಕರು ಇದ್ದೇವೆ, ಇದುವರೆವಿಗೂ ಅಲ್ಲಿ ಕೋಮುಗಲಭೆಯಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— 23ನೇ ತಾರೀಖು ಸಂಜೆ 8ಕ್ಕೆ ಈ ಘಟನೆ ನಡೆದಿರುವುದು ಸ್ವಲ್ಪ ಭಾಗ ನಿಜ. ತಕ್ಷಣವೇ ಪೋಲೀಸ್‌ನವರ ಮಧ್ಯೆ ಪ್ರವೇಶಿಸಿ ಆಗಬಹುದಾದ ಅನಾಹುತವನ್ನು ತಪ್ಪಿಸಿದ್ದಾರೆ. ಇದಕ್ಕಾಗಿ ನಾನು ಪೋಲೀಸ್ ರವರನ್ನು ಶ್ಲಾಘನೆ ಮಾಡಬಯಸುತ್ತೇನೆ. ಯಾರು ಎಷ್ಟೇ ದೊಡ್ಡವರಾಗಿದ್ದರೂ ಕೂಡ ಕಾನೂನಿಗೆ ವಿರುದ್ಧವಾಗಿ ನಡೆಯುವುದಕ್ಕೆ ಆಗುವುದಿಲ್ಲವೆಂದು ಸರ್ಕಾರಕ್ಕೆ ಗೊತ್ತಿದೆ ಹಾಗೂ ನಾವು ಇದಕ್ಕೆ ಅವಕಾಶವನ್ನು ಕೂಡ ಕೊಡುವುದಿಲ್ಲ. ಇವತ್ತು ಪರಿಸ್ಥಿತಿ ನಿಯಂತ್ರಣದಲ್ಲಿದೆ. ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ, ನಾವು ಸುಪ್ರೀಂ ಕೋರ್ಟಿನ ಆದೇಶಗಳನ್ನು ಉಲ್ಲಂಘನೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಪೋಲೀಸ್‌ನವರೂ ಕೂಡ ಉಲ್ಲಂಘನೆ ಮಾಡಿಲ್ಲ. ಗೋಹತ್ಯೆ ನಿಷೇಧಕ್ಕೆ ಸಂಬಂಧಪಟ್ಟಂತೆ ಕೇವಲ ಮೈಸೂರಿಗಾಗಿ ಅಷ್ಟೇ ಅಲ್ಲ ಇಡೀ ರಾಜ್ಯಕ್ಕೆ ಸೀಮಿತವಾಗಿಟ್ಟಂತೆ ಈ ಘಟನೆ ಮರುಕಳಿಸದಂತೆ ನಾವು ಎಲ್ಲಾ ಮುಂಜಾಗ್ರತೆ

12.10 ಪಿ.ಎಂ.

ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ವರ್ಷ ಬಕ್ರೀದ್ ಮತ್ತು ಮಹಾವೀರ ಜಯಂತಿ ಒಂದೇ ದಿವಸ ಬಂದಿರತಕ್ಕಂಥದ್ದು ಈ ಸದನದ ಎಲ್ಲಾ ಸದಸ್ಯರಿಗೂ ಗೊತ್ತಿರುವಂತಹ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ರಾಜಧಾನಿಯಲ್ಲಿ ಜೈನ್ ಮತ್ತು ಮುಸಲ್ಮಾನ ಹಾಗೂ ಇತರ ಜನಾಂಗದ ಮುಖಂಡರುಗಳನ್ನು ಕರೆಸಿ, ಮೊತ್ತೊಬ್ಬರ ಭಾವನೆಗಳಿಗೆ ನೋವಾಗದ ರೀತಿಯಲ್ಲಿ ಹಬ್ಬವನ್ನು ಆಚರಣೆ ಮಾಡುವುದಕ್ಕೆ ಈಗಾಗಲೇ ಸಭೆ ನಡೆಸಿ ಹೇಳಿದ್ದಾರೆ. ಈ ಸಭೆಯಲ್ಲಿ ಎರಡು ಗುಂಪಿನ ಮುಖಂಡರುಗಳು ಒಪ್ಪಿಕೊಂಡಿದ್ದಾರೆ. ಈಗ ಘಟನೆ ನಡೆದಿರತಕ್ಕಂಥದ್ದು ದುರ್ದೈವದ ವಿಚಾರ. ಯಾರ ಮೂಲಾಜಿಗೂ ಒಳಗಾಗದೆ ರೀತಿಯಲ್ಲಿ ಸರ್ಕಾರ ಮತ್ತು ಪೊಲೀಸ್ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ. ಯಾವುದೇ ರೀತಿಯ ಅನಾಹುತಗಳು ಸಂಭವಿಸದಂತೆ ಪೊಲೀಸ್ ಇಲಾಖೆಯವರು ಕ್ರಮ ಕೈಗೊಳ್ಳುತ್ತಾರೆ. ಆದ್ದರಿಂದ, ತಾವೂ ಕೂಡ ಯಾವುದೇ ರೀತಿಯ ಭಾವನೆಗಳಿಗೆ ಪ್ರಚೋದನೆ ಮಾಡುವುದಕ್ಕೆ ಅವಕಾಶ ಮಾಡಿಕೊಡದೆ, ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಜೊತೆ ಕಾನೂನು ರೀತಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಸಹಕಾರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾರು ತಪ್ಪು ಮಾಡಿದ್ದಾರೋ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಇದು ನೇರವಾಗಿ ನಡೆದಿರತಕ್ಕಂಥ ಹಲ್ಲೆ. ಇಲ್ಲಿ ಸುಮಾರು 300ರಿಂದ 400 ಜನ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಹಲ್ಲೆ ಮಾಡಿರುವವರಲ್ಲಿ ಇದುವರೆಗೆ ಎಷ್ಟು ಜನರನ್ನು ಬಂದಿಸಿದ್ದೀರಿ? ಇದರಲ್ಲಿ ಎಷ್ಟು ಜನ ತಪ್ಪಿಸಿಕೊಂಡು ಹೋಗಿದ್ದಾರೆ? ಏಕೆಂದರೆ, ಇದು ಬಹಳ ಮುಖ್ಯವಾದ ಪ್ರಶ್ನೆ. ಈ ಸರ್ಕಾರ ಯಾವಾಗಲೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳುತ್ತಾ ಬರುತ್ತಿದೆ ಅಷ್ಟೆ. ಇವತ್ತು ಪೊಲೀಸ್ ಇಲಾಖೆಯವರನ್ನು ನಾನೂ ಸಹ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಅವರು ಸಾಕಷ್ಟು ಶ್ರಮ ಪಡುತ್ತಿದ್ದಾರೆ. ಇವರು ಅಲ್ಲಿ ಗುಂಡು ಮತ್ತು ಅಶ್ರುವಾಯು ಹಾರಿಸದೇ ಇದ್ದಿದ್ದರೆ ಅವರ ಪ್ರಾಣ ಕೂಡ ಹೋಗುತ್ತಿತ್ತೇನೋ ಗೊತ್ತಿಲ್ಲ. ಕಿಡಿಗೇಡಿಗಳ ಮೇಲೆ ನಾವು ಅತಿ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ರಾಜ್ಯದ ಜನತೆಗೆ ತೋರಿಸಬೇಕಾಗುತ್ತದೆ.

ಅಧ್ಯಕ್ಷರು :— ಈ ವಿಷಯವನ್ನು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡುವ ಬದಲು ಶೂನ್ಯವೇಳೆಯಲ್ಲಿ ಮೆನ್‌ಷನ್ ಮಾಡಿ ಮಾತನಾಡಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಹಲ್ಲೆ ಮಾಡಿರುವವರಲ್ಲಿ ಎಷ್ಟು ಜನರನ್ನು ಅರೆಸ್ಟ್ ಮಾಡಲಾಗಿದೆ ಹಾಗೂ ಎಷ್ಟು ಜನರು ತಪ್ಪಿಸಿಕೊಂಡಿದ್ದಾರೆಂದು ಮತ್ತು ಈ ಘಟನೆಗಳಿಗೆ ಸಂಬಂಧಪಟ್ಟ ಪೂರ್ಣವಾದ ವಿವರಗಳನ್ನು ನಾಳೆ ದಿವಸ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು :— ಶಿರಾ ಘಟನೆಯಲ್ಲಿ ಮೃತಪಟ್ಟವರಿಗೆ ಪರಿಹಾರ ಕೊಟ್ಟಿಲ್ಲವೆಂದು ಮಾನ್ಯ ಅರಗ ಜ್ಞಾನೇಂದ್ರರವರು ಪ್ರಶ್ನಿಸಿದ್ದಾರೆ. ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು :— ಪ್ರಸ್ತಾಪ ಮಾಡಿ.

ಓ) ಶಿರಾದಲ್ಲಿ ಉಂಟಾದ ಗಲಭೆಯಲ್ಲಿ ಮೃತಪಟ್ಟ ಕುಟುಂಬಕ್ಕೆ ಪರಿಹಾರ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಶಿರಾ ಪಟ್ಟಣದಲ್ಲಿ ಶೇಂಗ ಬೆಲೆಯ ವ್ಯತ್ಯಾಸದಿಂದ ಬಹಳ ದೊಡ್ಡ ಗಲಾಟೆ ನಡೆಯಿತು. ಇದರಲ್ಲಿ ಐದು ಜನ ರೈತರು ಮತ್ತು ಸಾಯಿಪ್ರಕಾಶ್ ಎನ್ನತಕ್ಕಂಥ ಎಸ್.ಐ. ಕೂಡ ಕೊಲೆಯಾದರು. ಶ್ರೀಯುತರು ಕೊಲೆಯಾದ ನಂತರ ಅವರ ಕುಟುಂಬ ವರ್ಗದವರಿಗೆ ಇಷ್ಟು ಹಣವನ್ನು ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿತ್ತು. ಮೃತರಾದ ಸಾಯಿಪ್ರಕಾಶ್ ವ್ಯಕ್ತಿತ್ವದ ಬಗ್ಗೆ ಅಪಾರವಾದ ಗೌರವವನ್ನು ಅಲ್ಲಿರತಕ್ಕಂಥ ಎಲ್ಲಾ ರೈತರು ವ್ಯಕ್ತಪಡಿಸಿದ್ದನ್ನು ನಾನು ಸಮಿತಿ ಜೊತೆಯಲ್ಲಿ ಹೋದಾಗ ನನಗೆ ಕಾಣಿಸಿತು. ಒಬ್ಬ ಗೌರವಾನ್ವಿತ ವ್ಯಕ್ತಿ ತನ್ನ ಜೀವನದ ಹಂಗನ್ನು ತೊರೆದು ಹೋರಾಟ ಮಾಡಿ ಅಲ್ಲಿನ ಜನರಿಗೆ ಶಾಂತಿಯನ್ನು ಕೊಡುವ ದೃಷ್ಟಿಯಿಂದ ವಿಶೇಷವಾದ ಪ್ರಯತ್ನವನ್ನು ಈ ಅಧಿಕಾರಿ ಅಲ್ಲಿ ಮಾಡಿದ್ದಾರೆ. ಇವರು ಸತ್ತ ನಂತರ, ಮಾನ್ಯ ಗೃಹ ಸಚಿವರಾಗಲಿ ಅಥವಾ ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಗಳು ಮೃತರ ಮನೆಗೆ ಹೋಗಿ ಸಾಂತ್ವಾನ ಹೇಳಿ ಒಂದಿಷ್ಟು ಪರಿಹಾರ ಹಣವನ್ನು ಸರ್ಕಾರದ ಕಡೆಯಿಂದ ಕೊಡಬೇಕಾದ ಕೆಲಸವನ್ನು ಮಾಡಬೇಕಾಗಿತ್ತು. ನಾನು ಮೊನ್ನೆ ಅವರ ಕುಟುಂಬದವರನ್ನು ಭೇಟಿ ಮಾಡಿದೆ, ಇವರ ಕುಟುಂಬದಲ್ಲಿ ಅವರ ಪತ್ನಿ ಮತ್ತಿ ಚಿಕ್ಕ ಮಕ್ಕಳು ಇದ್ದಾರೆ. ನಮಗೆ ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು :— ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ನಾಲ್ಕೂವರೆ ವರ್ಷಗಳು ಕಳೆದು ಹೋಗಿದೆ. ಅದರು ನೀವು ಯಾವತ್ತು ಪಾರ್ಲಿಮೆಂಟರಿ ವ್ಯವಹಾರಗಳನ್ನು ಕಲಿತುಕೊಳ್ಳುವುದು? ಗಲಭೆಯಲ್ಲಿ ಸತ್ತು ಹೋದ ಸಬ್-ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್ ಕುಟುಂಬಕ್ಕೆ ಇನ್ನು ಪರಿಹಾರ ಸಿಕ್ಕಿಲ್ಲ ಎಂದು ಒಂದೇ ವಾಕ್ಯದಲ್ಲಿ ಹೇಳುವುದನ್ನು ಬಿಟ್ಟು, ನಮ್ಮ ಪಾಂಡಿತ್ಯದ ಎಲ್ಲಾ ಪ್ರದರ್ಶನ ಆಗಬೇಕಾದರೆ ನನಗೆ ತಾಳ್ಮೆ ಎಲ್ಲಿಂದ ಬರಬೇಕು? ಸಮಯವನ್ನು ನಾನು ಉತ್ಪಾದನೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಅರಗಜ್ಞಾನೇಂದ್ರ :— ನಾನು ಎದ್ದು ನಿಂತಾಗ ತಾವು ಈ ರೀತಿ ಹೇಳಿದರೆ ಹೇಗೆ?